



# ಸೈಲೊಸ್ ಕಣಜ ಕಲೆ

ಧಾನ್ಯಗಳನ್ನು ಸಂಗ್ರಹಿಸುವ ಪಣತಗಳು ಕಣ್ಮರೆಯಾಗುತ್ತಿರುವ ಈ ಹೊತ್ತಿನಲ್ಲಿ ದಕ್ಷಿಣ ಆಸ್ಟ್ರೇಲಿಯಾದಲ್ಲಿ 'ಕಲೆ'ಯ ಕಾರಣವಾಗಿ ಅವು ಮರುಜೀವ ಪಡೆದುಕೊಳ್ಳುತ್ತಿವೆ. 'ಸೈಲೊಸ್ ಕಲೆ' ಎಂದೇ ಜನಜನಿತವಾಗಿವೆ.

■ ನಿರಂಜನ ವಾನಳ್ಳಿ





ಆಸ್ಟ್ರೇಲಿಯಾದ ಅಡಿಲೇಡ್‌ನಿಂದ ಮೆಲ್ಬರ್ನ್‌ಗೆ 800 ಕಿ.ಮೀ. ದೂರ. ಕುಡಿದದ್ದು ತುಳುಕದಷ್ಟು ನುಣುಪಾಗಿರುವ ಆ ಹೆದ್ದಾರಿಯಲ್ಲಿ ಹೋಗುತ್ತಿದ್ದಾಗ, ದೈತ್ಯಾಕೃತಿಯ ಮನುಷ್ಯನ ಚಿತ್ರವಿರುವ ಗೋಡೆಯೊಂದು ಗಮನಸೆಳೆಯಿತು. 'ಇದು ಸೈಲೊಸ್ ಕಲೆ, ನೀವು ನೋಡಲೇಬೇಕು' ಎಂದು ಮಗಳು–ಅಳಿಯ ಕಾರು ನಿಲ್ಲಿಸಿದರು. ಅಲ್ಲಿಂದ ಮುಂದಕ್ಕೆ ಅನೇಕ ಕಡೆಗಳಲ್ಲಿ ಈ ಸೈಲೊಸ್‌ಗಳನ್ನು ನೋಡುವ ಅವಕಾಶವಾಯಿತು.

ಸೈಲೊಸ್‌ಗಳೆಂದರೆ ಪಣತಗಳು. ಗ್ರಾಮಗಳಲ್ಲಿ, ಬೆಳೆದ ಬೆಳೆಯನ್ನು ಸಂರಕ್ಷಿಸಿಡುವ ಉಪಾಯಗಳಾಗಿ ಈ ದೊಡ್ಡ ದೊಡ್ಡ ಪಣತಗಳು ಉದ್ಭವಿಸಿವೆ. ನಮ್ಮಲ್ಲಾದರೆ ಹಿಂದಿನ ಕಾಲದಲ್ಲಿ ದೊಡ್ಡ ಮನೆಗಳಲ್ಲಿ ಮರದಲ್ಲಿ ಮಾಡಿದ ಪಣತಗಳಿರುತ್ತಿದ್ದವು. ಅವುಗಳಲ್ಲಿ ಭತ್ತ ಅಥವಾ ಅಕ್ಕಿಯನ್ನು ಶೇಖರಿಸಿಡುವ ಸಂಪ್ರದಾಯವಿತ್ತು. ಈಗ ಪಣತಗಳೇ ಕಣ್ಮರೆಯಾಗಿವೆ. ಆದರೆ ದಕ್ಷಿಣ ಆಸ್ಟ್ರೇಲಿಯಾದಲ್ಲಿ ಈ ಪಣತಗಳಿಗೆ ಮರುಜೀವ ಬಂದಿದೆ. ಅವು ಸಿಲಿಂಡರ್ ಆಕೃತಿಯಲ್ಲಿರುವ ದೊಡ್ಡ ದೊಡ್ಡ ಸಿಮೆಂಟ್ ಬಾನಿಗಳು.

ಒಂದೊಂದು ಕಡೆ ನಾಲ್ಕೈದು ಪಣತಗಳನ್ನು ಒಟ್ಟಿಗೆ ಕಟ್ಟಲಾಗುತ್ತದೆ. ಅವುಗಳಲ್ಲಿ ರೈತರು ಬೆಳೆದ ಧಾನ್ಯಗಳನ್ನು ಸಂಗ್ರಹಿಸಿಡಲಾಗುತ್ತದಂತೆ. ಅವು ಹೇಗೆ ಕೆಲಸ ಮಾಡುತ್ತವೆ ಎಂಬುದು ಅಸ್ಪಷ್ಟವಾದರೂ, ಈ ಸೈಲೊಸ್‌ಗಳ ಮೇಲೆ ಬರೆದ ಚಿತ್ರಗಳಿಗಾಗಿ ಅವು ಪ್ರಸಿದ್ಧವಾಗುತ್ತಿವೆ. ನಮ್ಮಲ್ಲಿ ಹಿಂದೆ ಅಫ್ಘಾನಿಸ್ತಾನ, ಭಾರತ, ಚೀನಾಗಳನ್ನು ಬೆಸೆಯುವ 'ಸಿಲ್ಕ್ ರೂಟ್' ಇದ್ದಹಾಗೆ ಈಗ ಆಸ್ಟ್ರೇಲಿಯಾದಲ್ಲಿ 'ಸೈಲೊಸ್ ಟ್ರೇಲ್' ಇದೆ. ಅದರ ಉದ್ದಕ್ಕೂ ಕ್ರಮಿಸಿದರೆ 25ಕ್ಕೂ ಹೆಚ್ಚು ಸೈಲೊಸ್‌ಗಳು ನೋಡಸಿಗುತ್ತವೆ. ಇದರಲ್ಲಿ ದೇಸಿ ಕಲಾವಿದರಿಗೆ ಅವಕಾಶ ಕೊಟ್ಟು ಇಪ್ಪತ್ತು ಮೀಟರಿಗೂ ಎತ್ತರವಿರುವ ಪಣತಗಳ ಮೇಲೆ ತಮ್ಮ ಕಲ್ಪನೆಯ ಚಿತ್ರ ಬಿಡಿಸಲು ಆಹ್ವಾನ ನೀಡಲಾಗುತ್ತದೆ. ಅವರು ತಿಂಗಳುಗಟ್ಟಲೆ ಕಷ್ಟಪಟ್ಟು ಸೈಲೊಸ್ ಚಿತ್ರಗಳನ್ನು ರಚಿಸುತ್ತಾರೆ.

ಹೆದ್ದಾರಿ ಬದಿ ನಿರ್ಮಾಣವಾಗುವ ಈ ಬೃಹತ್ ಚಿತ್ರಗಳಿಗೆ ವಿವರಗಳು, ಕಲಾವಿದರ ಪರಿಚಯದ ಬೋರ್ಡುಗಳು ಸಿದ್ಧವಾಗುತ್ತವೆ. ಸನಿಹದಲ್ಲಿ ಈ ಸೈಲೊಸ್‌ಗಳನ್ನು ನೋಡಲು ನಿಲ್ಲುವ ಹೆದ್ದಾರಿಹೋಕರಿಗೆ ಪಾನೀಯ ಅಂಗಡಿ ಹಾಗೂ ಸ್ವಚ್ಛ ಶೌಚಾಲಯಗಳನ್ನು ಸೃಷ್ಟಿಸಲಾಗುತ್ತದೆ. ಮುಖ್ಯವಾಗಿ ಆ ಭಾಗದ ಮೂಲನಿವಾಸಿಗಳ ಕಲೆಯನ್ನು ಸೈಲೊಸ್ ಮೂಲಕ ಹೊರಜಗತ್ತಿಗೆ ಪರಿಚಯಿಸಲಾಗುತ್ತದೆ.

ಮೆಲ್ಬರ್ನ್ ಹೆದ್ದಾರಿಯಲ್ಲಿ ಇಂಥ ಹತ್ತಾರು ಸೈಲೊಸ್‌ಗಳಿವೆ. ಕೆಲವು ಹೆದ್ದಾರಿಯಿಂದ ಸ್ವಲ್ಪ ಒಳಗಿದ್ದರೂ ಅವುಗಳಿಗೆ ಸಾಕಷ್ಟು ಪ್ರಚಾರ ನೀಡಿ ದಾರಿಹೋಕರು ಸೈಲೊಸ್‌ಗಳನ್ನು ಹುಡುಕಿಕೊಂಡು ಆ ಗ್ರಾಮಗಳಿಗೆ ಭೇಟಿ ನೀಡುವಂತೆ ಮಾಡಲಾಗಿದೆ. ಇದರಿಂದ ಗ್ರಾಮದ, ಸ್ಥಳೀಯ ಕಲಾವಿದರ ಪರಿಚಯ ಹೊರಗಿನವರಿಗೆ ಆಗುತ್ತದೆ. ಸಣ್ಣ ಪುಟ್ಟ ವ್ಯಾಪಾರ ವಹಿವಾಟುಗಳೂ ವೃದ್ಧಿಸುತ್ತಿವೆ.

ಹೆದ್ದಾರಿಯುದ್ದಕ್ಕೂ ಇರುವ ಶೌಚಾಲಯಗಳ ವ್ಯವಸ್ಥೆ ಸ್ಥಳೀಯ ಆಡಳಿತಗಳದ್ದೇ. ಆದರೆ ಅವುಗಳನ್ನು ತುಂಬಾ ಎಚ್ಚರಿಕೆಯಿಂದ ನಿಭಾಯಿಸಿರುವುದನ್ನು ಕಾಣಬಹುದು. ಏಕೆಂದರೆ ಸೈಲೊಸ್‌ಗಳ ಮೇಲೆ ಗ್ರಾಮಗಳ ಪ್ರತಿಷ್ಠೆಯೂ ಅಡಗಿದೆ!

ಪ್ರತಿಕ್ರಿಯಿಸಿ: feedback@sudha.co.in